ಸಾಕ್ಷಿಯನ್ನು ಈ ದಿನ ದಿನಾಂಕ **28.07.2025** ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀಮತಿ ಎ ಎಲ್ ಎಚ್ ವಕೀಲರಿಂದಃ

ವಾದಿ ಬ್ಯಾಂಕ್ ಸಾಲದ ಹಣವನ್ನು ನೇರವಾಗಿ ಕಿಸಾನ್ ಮಿತ್ರಾ ಎಂಟರಪ್ರೈಸಸ್ ಅವರ ಖಾತೆಗೆ ಜಮಾ ಮಾಡಿದ್ದು ಎಂದರೆ ಸರಿ. ಪ್ರತಿವಾದಿಯು ಗ್ರಾಹಕ ವ್ಯಾಜ್ಯಗಳ ಪರಿಹಾರ ಕಮಿಷನನಲ್ಲಿ ಹಾಕಿರುವ ಅರ್ಜಿಯ ಬಗ್ಗೆ ನಾವು ಈ ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿ. ಗ್ರಾಹಕ ವ್ಯಾಜ್ಯಗಳ ಪರಿಹಾರ ಕಮಿಷನ ಮುಂದೆ ಪ್ರತಿವಾದಿಯು ಅರ್ಜಿ ಹಾಕಿರುವ ವಿಷಯ ಗೊತ್ತಿದ್ದರೂ ಸಹ ವಾದಿ ಬ್ಯಾಂಕ್ ಕಿಸಾನ್ ಮಿತ್ರಾ ಎಂಟರಪ್ರೈಸಸ್ ಜೊತೆ ಶಾಮೀಲಾಗಿ ಪ್ರತಿವಾದಿಯ ವಿರುದ್ದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಾಲ ಮಂಜೂರು ಮಾಡುವ ದಿನವೇ ಪ್ರತಿವಾದಿ ನಮ್ಮ ಬ್ಯಾಂಕಿಗೆ ಬಂದು ಅವರಿಗೆ ಕಿಸಾನ್ ಮಿತ್ರಾ ಎಂಟರಪ್ರೈಸಸ್ ನೀಡಿರುವ ಮಶಿನರಿಗಳು ಹಳೆಯದಾಗಿರುತ್ತವೆ ಮತ್ತು ಈ ಕಾರಣದಿಂದ ಸಾಲದ ಹಣ ಮಂಜೂರು ಮಾಡಬೇಡಿ ಎಂದು ಪ್ರತಿವಾದಿ ಬ್ಯಾಂಕಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಬ್ಯಾಂಕ್ ಕಿಸಾನ್ ಮಿತ್ರಾ ಎಂಟರಪ್ರೈಸಸ್ ಜೊತೆ ಸೇರಿಕೊಂಡು ಪ್ರತಿವಾದಿಯ ವಿರುದ್ದ ಈ ಸುಳ್ಳು ದಾವೆಯನ್ನು ಹಾಕಿ ಈಗ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಕೇಳಿ, ಅವರು ಹೇಳಿದಂತೆಯೇ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಕೊಂಡು, ನಂತರ ಓದಿ ಹೇಳಲಾಯಿತು ಎಂದು ಈ ಮೂಲಕ ಪ್ರಮಾಣಿಕರಿಸಲಾಗಿದೆ).

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.